ಶ್ರೀ ಆರ್.ವಿ.ದೇಶಪಾಂಡೆ : ಗೌರವಾನ್ವಿತ ಸ್ನೇಹಿತರು, ಹಿರಿಯರಾದಂಥ ರಮೇಶ್‌ಕುಮಾರ್‌ರವರು ಕೇಳಿದರು. ಆದಷ್ಟು ಬೇಗನೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಪ್ರಸ್ತಾವನೆ cabinet ಮುಂದೆ ಹೋಗುತ್ತಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : Doomed Universities ಏನು ವೇಗದಲ್ಲಿ ಹೋಗುತ್ತದೆ ಆ velocityಯಲ್ಲಿ ಪ್ರಯಾಣ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಗೋಪಾಲಯ್ಯ : ಇದನ್ನು ಯಾವ ಜಿಲ್ಲೆಯಲ್ಲಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಎಂದು ಸಭೆಗೆ ತಿಳಿಸಬೇಕು.

ಅಧ್ಯಕ್ಷರು: ಆದಷ್ಟು ಬೇಗ ಎಂದು ಹೇಳಿದ್ದಾರೆ. ನಾನು ಹೀಗೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ರುದ್ರಯ್ಯ ಕಮಿಟಿಯವರು 3 ಮಾಡಬೇಕೆಂದು ಹೇಳಿದರು. ಹಿಂದಿನ ಸರ್ಕಾರ 2 University ಮಾಡಬೇಕೆಂದು ಇಲ್ಲಿ ಶಾಸನಸಭೆಯಲ್ಲಿ ತಾವೇ ಕಾನೂನು ಮಾಡಿದ್ದೀರಿ. Governor ಕಡೆ ಹೋದಾಗ ಅವರು ಕೆಲವು ಸಂದೇಹ ವ್ಯಕ್ತ ಮಾಡಿ ವಾಪಸ್ ಕಳುಹಿಸಿದ ನಂತರ ನಾವೊಂದು ನಿರ್ಣಯ ಮಾಡುತ್ತೇವೆ, ಆದಷ್ಟು ಬೇಗನೆ ಇದರ ಬಗ್ಗೆ ನಿರ್ಣಯ ಆಗುತ್ತದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಇಷ್ಟೇ ಸದನದಲ್ಲಿ ಹೇಳಬಹುದು.

ಶ್ರೀ ಕೆ. ಗೋಪಾಲಯ್ಯ : ಯಾವ ಜಿಲ್ಲೆಯಲ್ಲಿ ಅಂದರೆ, ಚಿಕ್ಕಬಳ್ಳಾಪುರದಲ್ಲಿಯೇ, ಕೋಲಾರದಲ್ಲಿಯೇ ?

ಅಧ್ಯಕ್ಷರು : ಇವೆಲ್ಲ ಬರುವುದಿಲ್ಲ ಸುಮ್ಮನಿರಿ. Bifurcation ಅಷ್ಟೇ.

(ಗೊಂದಲ)

ಅಧ್ಯಕ್ಷರು : ಬರುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಪಡಿತರ ಚೀಟಿ ವಿತರಣೆ

33(328) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಗ್ರಾಮ ಪಂಚಾಯತ್‌ಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪಡಿತರ ಚೀಟಿ ತಯಾರಿಕೆಯಿಂದ ಗ್ರಾಮ ಪಂಚಾಯತ್ ಕೆಲಸವು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪಡಿತರ ಚೀಟಿಯ ವಿತರಣಾ ವ್ಯವಸ್ಥೆಯನ್ನು ನ್ಯಾಯ ಬೆಲೆ ಅಂಗಡಿಗೆ ನಿಗದಿಪಡಿಸುವುದು ಅಥವಾ ಗ್ರಾಮ ಪಂಚಾಯತಿನಲ್ಲಿ ಬದಲಿ ಸಿಬ್ಬಂದಿ ನೇಮಕ ಮಾಡಿ ವೇತನ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಪಡಿತರ ಚೀಟಿ ತಯಾರಿಕೆಯಿಂದಾಗಿ ದೂರವಾಣಿ ಬಿಲ್ಲು ಜಾಸ್ತಿಯಾಗಿ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ಮಾಡಿ ವಸೂಲಾತಿಗೆ ಸೂಚಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

(ಅ) ಬಂದಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 58 ರಂತೆ ಗ್ರಾಮ ಪಂಚಾಯತಿಯು ಅನುಸೂಚಿ 1 ರಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಹಲವಾರು ಅಭಿವೃದ್ಧಿ ಯೋಜನೆಗಳು ಅದರಲ್ಲೂ ಪ್ರಮುಖವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ, ವಸತಿ ಯೋಜನೆಗಳ ಅನುಷ್ಠಾನ, ಕುಡಿಯುವ ನೀರು ಸರಬರಾಜು ಯೋಜನೆ ಕಾರ್ಯಕ್ರಮಗಳು, ನಿರ್ಮಲ ಭಾರತ ಅಭಿಯಾನ, 13ನೇ ಹಣಕಾಸು ಯೋಜನೆ, ಎನ್.ಆರ್.ಎಲ್.ಎಂ. ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಕಾಲಬದ್ಧ ಮಿತಿಯಲ್ಲಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇಂತಹ ಹಲವಾರು ಯೋಜನೆಗಳ ಅನುಷ್ಠಾನ ಮಾಡುವುದರ ಜೊತೆಗೆ ಗ್ರಾಮ ಸಭೆ, ವಾರ್ಡ್ ಸಭೆ ಮತ್ತು ಇನ್ನಿತರೆ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗಿದ್ದು, ಗ್ರಾಮ ಪಂಚಾಯಿತಿಯಲ್ಲಿ ಜನಸಾಮಾನ್ಯರ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತದೆ.

(ಆ) ಮೇಲ್ಕಂಡ ಕಾರ್ಯಗಳ ಒತ್ತಡದಲ್ಲಿ ಗ್ರಾಮ ಪಂಚಾಯಿತಿಗಳು ಪಡಿತರ ಚೀಟಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವುದು ಕಷ್ಟಕರವಾಗಿರುತ್ತದೆ.

ಗ್ರಾಮ ಪಂಚಾಯಿತಿಗಳು ಪಡಿತರ ಚೀಟಿಗೆ ಸಂಬಂಧಿಸಿದಂತೆ ಅರ್ಜಿ ಪಡೆಯುವುದು, ಪರಿಶೀಲನೆ ಮತ್ತು ವಿತರಣೆ ಮಾಡುತ್ತಿರುವುದರಿಂದ ಇತರ ವಿವಿಧ ಅಭಿವೃದ್ಧಿ ಕೆಲಸಗಳಿಗೆ ನೀಡುತ್ತಿರುವ ಗಮನ ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆ.
(ಇ) ಪಡಿತರ ಚೀಟಿಯ ವಿತರಣಾ ವ್ಯವಸ್ಥೆಯನ್ನು ನ್ಯಾಯಬೆಲೆ ಅಂಗಡಿಗೆ ವಹಿಸಿಕೊಡುವುದರಿಂದ ಪಡಿತರ ಚೀಟಿಗಳ ದುರುಪಯೋಗವಾಗುವ ಹೆಚ್ಚು ಸಾಧ್ಯತೆ ಇದೆ. ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಬಲ ಹೆಚ್ಚಿಸಬಹುದಾಗಿರುತ್ತದೆ.
(ಈ) ಪಡಿತರ ಚೀಟಿ ತಯಾರಿಕೆಯಿಂದಾಗಿ ಗ್ರಾಮ ಪಂಚಾಯತಿಗಳಲ್ಲಿರು ವಂತಹ ದೂರವಾಣಿ ಬಿಲ್ಲು ಜಾಸ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಉತ್ತರ ಬಂದಿದೆ. ಉತ್ತರ ಸರಿಯಾಗಿದೆ. ಆದರೆ, ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಹೆಚ್ಚಿಸಬಹುದಾಗಿರುತ್ತದೆ ಎಂದಿದೆ. ಯಾರು ಎಂದು ಗೊತ್ತಾಗಲಿಲ್ಲ ? ಸಿಬ್ಬಂದಿಗಳನ್ನು ಯಾರು ಹೆಚ್ಚಿಸಬೇಕು ? ಪಂಚಾಯಿತಿಯವರೇ ? ಇಲಾಖೆಯವರೆ ? ಇ–ಸ್ವತ್ತು, 9, 11, NREG, ಸಕಾಲ, ಪಡಿತರ, ವಸತಿ, data entry ಎಲ್ಲವನ್ನೂ ಒಂದಿಬ್ಬರೇ ಮಾಡುವುದಾದರೆ ಅಲ್ಲಿ ಬೇರೆ ಕೆಲಸ ಆಗುತ್ತಿಲ್ಲ. ಈಗ ಸಿಬ್ಬಂದಿ ಕೊರತೆ ಇದೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಏನು ಹೇಳಿ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ :ಸಿಬ್ಬಂದಿಯನ್ನು ಯಾರು ನೇಮಕ ಮಾಡುವುದು ?

ಶ್ರೀ ಹೆಚ್.ಕೆ. ಪಾಟೀಲ್ : ಸಿಬ್ಬಂದಿ ಹೆಚ್ಚು ಮಾಡುವ ಸಲುವಾಗಿ ಇಲಾಖೆ ಈಗಾಗಲೇ ಕಾರ್ಯಕ್ರಮವನ್ನು ರೂಪಿಸುತ್ತಿದೆ. ಹೆಚ್ಚಿನ PDO ಗಳನ್ನು ನೇಮಕ ಮಾಡಿಕೊಳ್ಳತಕ್ಕಂಥ ಪ್ರಕ್ರಿಯೆ ನಡೆದಿದೆ. Data Entry Operator ಗಳನ್ನು ಯಾವ ರೀತಿಯಾಗಿ ನೇಮಕ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಚಿಂತನೆ ನಡೆದಿದೆ. ಸಾಕಷ್ಟು ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕಾದಂಥ ಅವಶ್ಯಕತೆ ಇದ್ದು, ಅದಕ್ಕೆ ಏನೇನು ಪ್ರಕ್ರಿಯೆ ಪ್ರಾರಂಭ ಮಾಡಬೇಕೋ ಮಾಡುತ್ತಿದ್ದೇವೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳ ಭರ್ತಿ

34(278) ಶ್ರೀ ತುಕಾರಾಮ್.ಈ (ಸಂಡೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–
(ಅ) ಸಂಡೂರು ಮತಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ; (ವಿಷಯವಾರು ಮಾಹಿತಿ ಒದಗಿಸುವುದು)